# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಗುಂಡ್ಲುಪೇಟೆ

## ಓ.ಎಸ್. ನಂ. 175/2021

| | | | |
|---|---|---|---|
| ಸಾಕ್ಷಿದಾರರ ಹೆಸರು | ಜಿ. ಶಿಲ್ಪಾ | ಪ್ರಮಾಣ ವಚನ ಬೋಧಿಸಿದ ದಿನಾಂಕ | 17.04.2025 |
| ಗಂಡನ ಹೆಸರು | ಮೇಲಗಿರಿಗೌಡ | | |
| ವಯಸ್ಸು | 37 ವರ್ಷ | | |
| ವೃತ್ತಿ | ಪಿಡಿಓ, ಅಣ್ಣೂರು ಗ್ರಾಮ ಪಂಚಾಯಿತಿ | ಸಿಡಬ್ಲ್ಯೂ | 1 |
| ವಾಸ ಸ್ಥಳ | ಕಳ್ಳಿಪುರ | | |

ಈ ನ್ಯಾಯಾಲಯವು ಸೂಚಿಸಿದಂತೆ ನಾನು ದಿಃ 18.09.2024 ರಂದು ನಾನು ಸ್ಥಳ ಪರಿಶೀಲನೆಗೆ ಹೋಗಿರುತ್ತೇನೆ. ಆ ವೇಳೆಯಲ್ಲಿ ಉಭಯತತ್ರರ ನೋಟೀಸ್ ಕೊಟ್ಟಿರುತ್ತೇನೆ. ನಾನು ಸ್ಥಳ ಕ್ಕೆ ಹೋದಾಗ ವಾದಿ ಮತ್ತು ಪ್ರತಿವಾದಿಗಳು ಸ್ಥಳದಲ್ಲಿ ಇದ್ದರು. ಆ ನಂತರ ದಾವ ಆಸ್ತಿಯನ್ನು ಅಳತೆ ಮಾಡಿರುತ್ತೇನೆ. ಪ್ರತಿವಾದಿಗಳು ಯಾವುದೇ ಸೆಟ್ ಬ್ಯಾಕ್ ಬಿಡದೆ ತಮ್ಮ ಅಳತೆಗೆ ತಕ್ಕಂತೆ ಮನೆ ಕಟ್ಟಿರುತ್ತಾರೆ. ವಾದಿಯು 2 ಅಡಿ ಜಾಗವನ್ನು ಬಿಟ್ಟು ಮನೆ ಕಟ್ಟಿರುತ್ತಾರೆ. ಆ ಗಲ್ಲಿಯು ವಾದಿಗೆ ಸೇರಿದ್ದಾಗಿರುತ್ತದೆ. ಈ ಬಗ್ಗೆ ನಾನು ನಕಾಶೆಯನ್ನು ತಯಾರಿಸಿ ನ್ಯಾಯಾಲಯಕ್ಕೆ ನೀಡಿರುತ್ತೇನೆ. ಸಾಕ್ಷಿಯು ಸಲ್ಲಿಸಿದ ವರದಿಯನ್ನು ನಿಪಿ 1 ಎಂದು ಮತ್ತು ನಕಾಶೆಯನ್ನು ನಿಪಿ 2 ಎಂದು ಗುರ್ತಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎ.ಸಿ.ಎಸ್ ವಕೀಲರಿಂದ**

ನಾನು ಕಡತವನ್ನು ಸ್ಥಳಕ್ಕೆ ತೆಗೆದುಕೊಂಡು ಹೋಗಿ ಅದರಂತೆ ಅಳತೆ ಮಾಡಿರುತ್ತೇನೆ. ನಮ್ಮ ಅಸ್ಸೆಸ್ಮೆಂಟ್ ನಂತೆ 33/1 ಮತ್ತು 33 ಪ್ರತ್ಯೇಕವಾಗಿ ಖಾತೆ ಆಗಿದೆ. ಅಸ್ಸೆಸ್ಮೆಂಟ್ ನಂ.33 ಕರಿಯಯ್ಯ ಬಿನ್ ಚಿಕ್ಕಕರಿಯಯ್ಯನ ಹೆಸರಿನಲ್ಲಿ ಇತ್ತು. ಅದು 61 x 28 ½ ಇತ್ತು. ಅದರಲ್ಲಿ 33 x 28 ½ ಅಡಿಯನ್ನು ಪೂರ್ವದ ಭಾಗವನ್ನು ಪ್ರತಿವಾದಿಗಳಿಗೆ ನೋಂದಾಯಿತ ಪತ್ರದ ಮೂಲಕ ವರ್ಗಾವಣೆ

ಮಾಡಿರುತ್ತಾರೆ. ಪ್ರತಿವಾದಿಗಳು ತಾನು ಕ್ರಯಕ್ಕೆ ಪಡೆದ ಆಸ್ತಿಯಲ್ಲಿ ವಾಸವಿಲ್ಲ ಆದರೆ ಕರಿಯಯ್ಯನವರ ಮಾರದೆ ಇರುವ ಪಶ್ಚಿಮ ಭಾಗದ ಮನೆಯಲ್ಲಿ ವಾಸ ಮಾಡಿರುತ್ತಾರೆ. ಕರಿಯಯ್ಯ ಮಾರಾಟ ಮಾಡದೆ ಬಿಟ್ಟಿರುವ ಆಸ್ತಿಯು ವಾದಿಯ ಆಸ್ತಿಯ ದಕ್ಷಿಣ ಭಾಗಕ್ಕೆ ಇರುವ ಆಸ್ತಿ ಎಂದರೆ ಸರಿ. ದಾವ ಆಸ್ತಿ ಸರ್ವೇ ನಂಬರ್ 199/5 ಕ್ಕೆ ಸಂಬಂಧಪಟ್ಟಂತೆ ಆಸ್ತಿ ಎಂದರೆ, ಸರ್ವೇ ನಂಬರ್ ನನಗೆ ಗೊತ್ತಿಲ್ಲ. ದಾವ ಆಸ್ತಿಯಲ್ಲಿ ಯಾವುದೇ ಶೌಚಾಲಯವನ್ನು ಪ್ರತಿವಾದಿಗಳು ಕಟ್ಟಿಲ್ಲ. ವಾದಿಗಳ ದಾವ ಆಸ್ತಿಯ ದಕ್ಷಿಣದಲ್ಲಿ ಪ್ರತಿವಾದಿಗಳು ಶೌಚಾಲಯ ಕಟ್ಟಿಸಿಲ್ಲ, ವಾದಿಗಳು ಬಿಟ್ಟಿರುವ ಗಲ್ಲಿಯ ಜಾಗದ ನಂತರ ಶೌಚಾಲಯ ಇದೆ. ಪ್ರತಿವಾದಿಗಳು ವಾದಿಯ 2 ಅಡಿ ಗಲ್ಲಿಯಲ್ಲಿ ಪೈಪ್ ಲೈನ್ ಇದೆ.

ಮರು ವಿಚಾರಣೆಃ ಇಲ್ಲ.

(1ನೇ ಪ್ರತಿವಾದಿ ಹಾಜರಿದ್ದು ಯಾವುದೇ ಪಾಟೀಸವಾಲು ಕೇಳುವುದಿಲ್ಲ)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ಶಿವಕುಮಾರ ಜಿ.ಜೆ)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ